# ಸರ್ಪ ಸ್ವಾರಸ್ಯ



ಇನ್‌ಲ್ಯಾಂಡ್ ತೈಪಾನ್ ಎಂಬ ಹಾವು ಅತ್ಯಂತ ವಿಷಕಾರಿಯಾಗಿದ್ದು, ಇದರ ವಿಷ 100 ಜನರನ್ನು ಸಾಯಿಸಬಲ್ಲುದು.

ಜೀವಸೃಷ್ಟಿಯಲ್ಲಿ ಉರಗಗಳದ್ದು ಕೌತುಕದ ಜಗತ್ತು. ದೇಹ ರಚನೆಯೊಂದಿಗೆ ಗುಣ ವಿಶೇಷಣದಲ್ಲೂ ಭಿನ್ನತೆಯಿಂದ ಗುರುತಿಸಿಕೊಂಡ ಸಾವಿರಾರು ಪ್ರಭೇದದ ಸರೀಸೃಪಗಳು ಭೂಮಿ ಮೇಲಿವೆ. ಹಾವುಗಳ ಕುರಿತು ತಿಳಿದುಕೊಳ್ಳಲೇಬೇಕಾದ ಕೆಲವು ಸ್ವಾರಸ್ಯಕರ ಸಂಗತಿಗಳು ಇಲ್ಲಿವೆ.

**ಡಾ. ಎನ್‌.ಬಿ. ಶ್ರೀಧರ**



ಪ್ರಪಂಚದಲ್ಲಿ 3600ಕ್ಕಿಂತ ಹೆಚ್ಚಿನ ಪ್ರಭೇದದ ಹಾವುಗಳಿದ್ದರೂ, ಅವುಗಳಲ್ಲಿ ಕೇವಲ 300 ಪ್ರಭೇದಗಳು ವಿಷಕಾರಿ.

ಹಾವುಗಳು ಸಂಘಜೀವಿಗಳಲ್ಲ. ಬಹುತೇಕ ಹಾವುಗಳು ಮಿಲನ ಸಮಯದ ಹೊರತಾಗಿ ಏಕಾಂಗಿ ಜೀವನ ಬಯಸುತ್ತವೆ.

ಹಾವುಗಳ ಹೃದಯ ಮತ್ತು ಶ್ವಾಸಕೋಶ ಅತ್ಯಂತ ಕಡಿಮೆ ಪ್ರಮಾಣದಲ್ಲಿ ಕೆಲಸ ಮಾಡುತ್ತವೆ. ಅವುಗಳ ಹೃದಯದ ಬಡಿತ ಪ್ರತಿ ನಿಮಿಷಕ್ಕೆ 50 ಮತ್ತು ಉಸಿರಾಟದ ವೇಗ 20 ಇರುತ್ತವೆ.

ಹಾವುಗಳ ಉದರದಲ್ಲಿ ರೋಗಕಾರಕ ಇ.ಕೊಲೈ ಮತ್ತು ಸಾಲ್ಮೊನೆಲ್ಲಾ ವರ್ಗಕ್ಕೆ ಸೇರಿದ ಬ್ಯಾಕ್ಟೀರಿಯಾಗಳಿವೆ.



ಸಮುದ್ರದಲ್ಲಿರುವ ಬಹುತೇಕ ಹಾವುಗಳು ಅತ್ಯಂತ ವಿಷಕಾರಿಗಳು.

ಹಾವುಗಳು ಸರೀಸೃಪಗಳಾಗಿವೆ ಮತ್ತು ಸರಿಸುಮಾರು 10 ಕೋಟಿ ವರ್ಷಗಳಿಂದ ಭೂಮಿಯಲ್ಲಿವೆ. ಇವುಗಳು ಹಲ್ಲಿಗಳಿಂದ ವಿಕಸನಗೊಂಡ ಜೀವಿಗಳು.

ಹಾವುಗಳಿಗೆ ಕಿವಿಗಳಿಲ್ಲ, ಆದರೆ ಕಿವಿಯಾಕಾರದ ಅಂಗವಿದೆ. ಅವುಗಳಿಗೆ ಶಬ್ದಗ್ರಹಣ ಶಕ್ತಿ ಇದೆ. ಕೆಲವೊಮ್ಮೆ ದವಡೆ ಮೂಲಕವೂ ಶಬ್ದಗಳನ್ನು ಗ್ರಹಿಸುತ್ತವೆ.

ಹಾವುಗಳು ಸರಾಸರಿ 10 ವರ್ಷ ಬದುಕಿದರೆ, ಸಾಕಿದ ಹಾವುಗಳು 20–25 ವರ್ಷ ಬದುಕಿದ್ದಿದೆ. ಸಾಕಿದ ಹಾವುಗಳು ಕಾಡಿನಲ್ಲಿರುವ ಹಾವುಗಳಿಗಿಂತ ದುಪ್ಪಟ್ಟು ಬದುಕುತ್ತವೆ. ಕೆಲವೊಂದು ಸಾಕಿದ ಹಾವುಗಳು 42 ವರ್ಷ ಬದುಕಿ ಗಿನ್ನಿಸ್ ದಾಖಲೆ ಬರೆದಿವೆ.

ಕೆಲವು ಹಾವುಗಳು ಪ್ರತಿ ಗಂಟೆಗೆ 30 ಕಿ.ಮೀ. ವೇಗದಲ್ಲಿ ಚಲಿಸುತ್ತವೆ.



ನ್ಯೂಜಿಲೆಂಡ್, ಗ್ರೀನ್‌ಲ್ಯಾಂಡ್, ಐಸ್‌ಲ್ಯಾಂಡ್ ಸ್ಥಳಗಳಲ್ಲಿ ಹಾವುಗಳಿಲ್ಲ.

ಹಾವಿನ ವಿಷ ಇರುವುದು, ಅದು ಬೇಟೆಯಾಡಿದ ಪ್ರಾಣಿಯನ್ನು ಜೀರ್ಣಗೊಳಿಸಲು. ಕೆಲವು ಹಾವುಗಳಿಗೆ ಅವು ವಿಷ ಹೊಂದಿರುವುದೇ ತಿಳಿದಿಲ್ಲ. ಆಕಸ್ಮಾತ್ ಅವುಗಳಿಗೇ ಕಡಿದುಕೊಂಡು ಅವೇ ಸತ್ತದ್ದೂ ಇದೆ.

